### ಪ್ರಧಾನಿ ಮೋದಿ ವಿರುದ್ಧ ಮಾತನಾಡಿದ್ದಕ್ಕೆ ಆರ್‌ಎಸ್‌ಎಸ್ ಕಾರ್ಯಕರ್ತರಿಂದ ದೂರು

# ಹಂಪನಾ ವಿಚಾರಣೆ, ಸಾರಸ್ವತ ಲೋಕದ ಖಂಡನೆ

■ **ವಿಕ ಸುದ್ದಿಲೋಕ** ಮಂಡ್ಯ

ಕೇಂದ್ರದ ಬಿಜೆಪಿ ಸರಕಾರ ಮತ್ತು ಪ್ರಧಾನಿ ಮೋದಿ ಅವರನ್ನು ಟೀಕಿಸಿದ್ದ ಸಂಶೋಧಕ, ನಾಡೋಜ ಹಂ.ಪ.ನಾಗರಾಜಯ್ಯ



ಅವರನ್ನು ಪೊಲೀಸರು ಠಾಣೆಗೆ ಕರೆಸಿ ವಿಚಾರಣೆಗೆ ನಡೆಸಿದ್ದಾರೆ. ಪೊಲೀಸರ ಈ ಕ್ರಮವು ಜಿಲ್ಲೆಯಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿದ್ದು, ಸಾರ್ವಜನಿಕ ವಲಯದಿಂದ ಪರ-ವಿರೋಧ ವ್ಯಕ್ತವಾಗುತ್ತಿದೆ.

ನಗರದಲ್ಲಿ ಜ.17ರಂದು ನಡೆದ ಮಂಡ್ಯ ತಾಲೂಕು 16ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದ್ದ ಹಂಪನಾ ಅವರು, ಪ್ರಧಾನಿ ಮೋದಿ ಅವರು ರೈತರ ಸಮಸ್ಯೆ ಅರಿಯದೆ ನಿರ್ದಯಿಯಾಗಿ ವರ್ತಿಸುತ್ತಿದ್ದಾರೆ. ತೋರ್ಪಡಿಕೆಗೆ ಒಳ್ಳೆಯವನಂತೆ ಕಾಣಿಸಿಕೊಳ್ಳುತ್ತಾ, ಅಂತರ್ಯದಲ್ಲಿ ದುರ್ಯೋಧನನಂತೆ ವರ್ತಿಸುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಬಗ್ಗೆ ಆರ್‌ಎಸ್‌ಎಸ್ ಕಾರ್ಯಕರ್ತರಾದ ಮ.ಸಿ.ರವಿ ಮತ್ತು ಕ್ರಾಂತಿ ಮಂಜು ಅವರು, ಜ.20ರಂದು ಮಂಡ್ಯ ಪಶ್ಚಿಮ ಠಾಣೆ ಪೊಲೀಸರಿಗೆ ದೂರು ನೀಡಿದ್ದರು. ಹಂಪನಾ ಅವರಿಗೆ ಕರೆ ಮಾಡಿದ ಪೊಲೀಸರು, ದೂರು ಅರ್ಜಿ ಬಗ್ಗೆ ವಿಚಾರಣೆಗಾಗಿ ಮಂಡ್ಯಕ್ಕೆ ಬರುವಂತೆ ಸೂಚಿಸಿದ್ದರು. ಹಂಪನಾ ಅವರು ಜ.21ರಂದು ಠಾಣೆಗೆ ತೆರಳಿ ಹೇಳಿಕೆ ನೀಡಿದ್ದಾರೆ. ರೈತರ ಹೋರಾಟ, ಕೇಂದ್ರದ ನಿಲುವಿನ ಬಗ್ಗೆಯಷ್ಟೇ ಮಾತನಾಡಿದ್ದೆ. ಆಕ್ಷೇಪಾರ್ಹ ಪದಗಳನ್ನು ಬಳಸಿಲ್ಲವೆಂದು ಸ್ಪಷ್ಟನೆ ನೀಡಿದ್ದಾರೆ. ಠಾಣೆಗೆ ಕರೆಸಿರುವ ಬಗ್ಗೆ ಪರ-ವಿರೋಧ ವ್ಯಕ್ತವಾಗುತ್ತಿದೆ.

● ದುರ್ಯೋಧನ ಪದ ಬಳಸಿಲ್ಲವೆಂದು ಸ್ಪಷ್ಟೀಕರಣ ನೀಡಿದ್ದಾರೆ. ಅವರನ್ನು ಗೌರವಯುತವಾಗಿಯೇ ನಡೆಸಿಕೊಂಡು ಕಳುಹಿಸಿಕೊಟ್ಟಿದ್ದೇವೆ.

- **ಕೆ.ಪರಶುರಾಮ್** ಎಸ್ಪಿ, ಮಂಡ್ಯ

## ಕೀಚಕ ನಡೆಯ ಪ್ರತೀಕ ಎಂದ ಡಿಕೆಶಿ

ಬೆಂಗಳೂರು: ಕೇಂದ್ರ ಸರಕಾರದ ವಿರುದ್ಧ ಧ್ವನಿಯೆತ್ತಿದ ಖ್ಯಾತ ಸಾಹಿತಿ, ಸಂಶೋಧಕ ಹಂ.ಪ. ನಾಗರಾಜಯ್ಯ ವಿರುದ್ಧ ಪೊಲೀಸ್ ಕೈಗೊಂಡ ಕ್ರಮವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತೀವ್ರವಾಗಿ ಖಂಡಿಸಿದ್ದಾರೆ. ''ಠಾಣೆಗೆ ಕರೆಸಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ ಹಾಗೂ ಕೀಚಕ ನಡೆಯ ಪ್ರತೀಕ,'' ಎಂದು ಟೀಕಿಸಿದ್ದಾರೆ. ''ಸರಕಾರ ತನ್ನ ಈ ವಕ್ರನಡೆಯನ್ನು ತಿದ್ದಿಕೊಳ್ಳದಿದ್ದರೆ ಹೋರಾಟ ನಡೆಸಬೇಕಾಗುತ್ತದೆ,'' ಎಂದು ಎಚ್ಚರಿಕೆ ನೀಡಿದ್ದಾರೆ.

## ಮನಸಿಗೆ ನೋವಾಯಿತು

**ಮಂಡ್ಯ:** ಮಂಡ್ಯದಲ್ಲಿ ನಾನು ಮಾಡಿದ ಭಾಷಣವನ್ನು ಆಕ್ಷೇಪಿಸಿ ಕೆಲವರು ದೂರು ಕೊಟ್ಟಿದ್ದರು. ಹಾಗಾಗಿ ಪೊಲೀಸರು ಕರೆ ಮಾಡಿ ವಿವರಣೆ ಕೇಳಿದರು. ಹೇಳಿಕೆ ನೀಡುವಂತೆ ಠಾಣೆ ಕರೆದಿದ್ದು ಮನಸ್ಸಿಗೆ ನೋವಾಯಿತು. ಇದು ನನ್ನ ಹಾಗೂ ನಾಡಿನ ಅಭಿಪ್ರಾಯವೂ ಹೌದು ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಹೇಳಿದರು.

'ವಿಜಯ ಕರ್ನಾಟಕ'ದೊಂದಿಗೆ ಮಾತನಾಡಿದ ಅವರು, ದೂರು ಅರ್ಜಿ ನೋಡಿದ ನಂತರವಷ್ಟೇ ಪ್ರತಿಕ್ರಿಯೆ ಕೊಡಲೆಂದು ಮಂಡ್ಯಕ್ಕೆ ಬಂದೆ. ನಾನು ಮಾತನಾಡಿದ್ದಕ್ಕೂ ಅರ್ಜಿಯಲ್ಲಿದ್ದ ದೂರಿಗೂ ಸಂಬಂಧವಿರಲಿಲ್ಲ. ಆದರೆ, ರೈತರ ಬಗ್ಗೆ ಮಾತನಾಡಿದ್ದುಂಟು. ದೇಶದ ಸಮಸ್ಯೆಯನ್ನು ವಿಶ್ಲೇಷಣೆ ಮಾಡಿ ಮಾತನಾಡಿದ್ದೇನೆ. ಆಕ್ಷೇಪಾರ್ಹ ಪದಗಳನ್ನು ಬಳಸಿಲ್ಲವೆಂದು ಲಿಖಿತ ಹೇಳಿಕೆ ನೀಡಿದ್ದೇನೆ ಎಂದು ತಿಳಿಸಿದರು. ಠಾಣೆಯಲ್ಲಿ ಪೊಲೀಸರು ನನ್ನನ್ನು ತುಂಬಾ ಗೌರವದಿಂದ ನಡೆಸಿಕೊಂಡರು. ಎಸ್ಪಿ ಕೂಡ ಮೊಬೈಲ್ ಕರೆ ಮಾಡಿ ಕ್ಷಮೆ ಕೇಳಿದರು. ಇದರಿಂದ ನನ್ನ ಆತ್ಮವಿಶ್ವಾಸವೂ ಹೆಚ್ಚಾಗಿದೆ ಎಂದು ಹೇಳಿದ್ದಾರೆ.